ಬಾಂಬುಗಳ ಯುದ್ಧಮಾದರಿಗಳ ಆಚೆ ಇನ್ನೊಂದು ಬಗೆಯ ಯುದ್ಧ ಹುಟ್ಟುತ್ತದೆ ಎಂಬುದನ್ನು ವಿಶ್ವಸಂಸ್ಥೆ 1945ರಲ್ಲಿ ಆರಂಭವಾಗುವಾಗ ಊಹಿಸಿರುವುದೂ ಶಕ್ಯವಿಲ್ಲ.

## ಸೈಬರ್ ಕದನದ ಹುಟ್ಟು

ಸೈಬರ್ ಕದನ ಎಂಬ ಹೊಸ ಯುದ್ಧಮಾದರಿ ಆರಂಭವಾಗಿದ್ದೇ 1960ರ ದಶಕದಲ್ಲಿ. ಹಾಗಾದರೆ ತಂತ್ರಜ್ಞಾನ ಸಂಶೋಧನೆಗಳು ನಮಗೆ ಮಾರಕವೆ? ವಿನಾಶಕ್ಕೆ ಮಾರ್ಗವೆ? ಸೈಬರ್ ಯುದ್ಧವು ಹಿಂದಿನ ಎಲ್ಲ ಯುದ್ಧಗಳಿಗಿಂತ ಭೀಕರ ಪರಿಣಾಮ ಬೀರಲಿವೆಯೇ? ಮುಂದೆ ನಡೆಯಲಿರುವ ಭೌತಿಕರೂಪದ ಯುದ್ಧಗಳಿಗೆ ಇಂಬು ನೀಡುವ ಕೆಲಸ ಮಾಡುವುದೆ? ಪ್ರಶ್ನೆಗಳೇಳುವಷ್ಟು ಸರಳವಾಗಿ ಉತ್ತರ ಇಲ್ಲ.

## ಹ್ಯಾಕಿಂಗ್ ಎಂದರೇನು?

ಯಾವುದೇ ಒಂದು ನೆಟ್‌ವರ್ಕ್ ಅಥವಾ ಕಂಪ್ಯೂಟರಿಗೆ ಅನಧಿಕೃತ ನಿರ್ದೇಶನಗಳನ್ನು ನೀಡುವುದೇ ಹ್ಯಾಕಿಂಗ್. ಜಗತ್ತಿನ ಮೊದಲ ಹ್ಯಾಕ್ ನಡೆದಿದ್ದು 1960ರ ದಶಕದಲ್ಲಿ. ಆಗ ದೊಡ್ಡಗಾತ್ರದ ಕಂಪ್ಯೂಟರ್‌ಗಳಿದ್ದವು. ಕಂಪ್ಯೂಟರ್ ಎನ್ನುವುದಕ್ಕಿಂತ ಕಂಪ್ಯೂಟರ್ ಮೆಷಿನ್‌ಗಳ ಕಾಲ ಅದು. ಈ ಮೆಷಿನ್‌ಗಳನ್ನು ನಿರ್ವಹಿಸಲು ಹರಸಾಹಸಪಡಬೇಕಾಗಿತ್ತು. ಕಂಪ್ಯೂಟರ್ ಪ್ರೋಗ್ರಾಮಿಂಗ್ ಬದಲಾಯಿಸುವುದು, ಶಾರ್ಟ್‌ಕಟ್‌ಗಳನ್ನು ಕಂಡುಹಿಡಿಯುವುದು, ಹೊಸ ಸಂಶೋಧನೆ ಮಾಡುವುದು, ಆಕಾರ ಬದಲಿಸುವುದು ಎಲ್ಲ ರೀತಿಯ ಪ್ರಯೋಗಗಳೂ ನಡೆಯುತ್ತಿದ್ದವು.

ಇದೇ ಸಂದರ್ಭದಲ್ಲಿ ಎಂ.ಐ.ಟಿ. (ಮೆಸೆಚ್ಯೂಟ್ಸ್ ಇನ್‌ಸ್ಟಿಟ್ಯೂಟ್ಸ್ ಆಫ್ ಟೆಕ್ನಾಲಜಿ) ವಿದ್ಯಾರ್ಥಿಗಳು ಕಂಪ್ಯೂಟರ್‌ಗಳು ಹೇಗೆ ಕಾರ್ಯನಿರ್ವಹಿಸುತ್ತವೆ ಎಂದು ಕುತೂಹಲರಾಗಿ ಅದಕ್ಕೆ ಸಂಬಂಧಿಸಿ ಹೊಸ ಹೊಸ ವಿಷಯಗಳನ್ನು ಭೇದಿಸಲು ಪ್ರಯತ್ನಿಸುತ್ತಿದ್ದರು. ಕಂಪ್ಯೂಟರ್‌ಗಳನ್ನು ಬಳಸುವಾಗ ಹೊಸ ರೀತಿಯ ಬಳಕೆ ವಿಧಾನವನ್ನು ಕಂಡುಕೊಂಡಾಗೆಲ್ಲ ಅದನ್ನು 'ಹ್ಯಾಕ್' ಎಂದು ಕರೆಯಲಾರಂಭಿಸಿದರು. ಮೂಲಬಳಕೆಯ ವಿಧಾನದಿಂದ ಹೊರತಾದ ಹೊಸ ಶಾರ್ಟ್‌ಕಟ್‌ಗಳ ಅನ್ವೇಷಣೆಯನ್ನು 'ಹ್ಯಾಕ್' ಎಂದು ಗುರುತಿಸಲಾಯಿತು.

1969ರಲ್ಲಿ ಅಮೆರಿಕದ ನ್ಯೂಜೆರ್ಸಿಯಲ್ಲಿ ಬೆಲ್ ಲ್ಯಾಬ್‌ನ ಡೆನ್ನಿಸ್ ರಿಟ್ಚಿ ಮತ್ತು ಕೆನ್ ಥಾಮ್ಸನ್ ಎಂಬ ಇಬ್ಬರು ಉದ್ಯೋಗಿಗಳು ಕಂಪ್ಯೂಟರ್ ಬಳಕೆಯ ಸಾಮಾನ್ಯ ನಿಯಮಗಳನ್ನು ರೂಪಿಸಿ ಸಾರ್ವಜನಿಕಗೊಳಿಸಿದರು. ಈ ಮೊದಲ 'ಹ್ಯಾಕ್' ಅನ್ನು ಯುನಿಕ್ಸ್ ಎಂದು ಕರೆಯಲಾಯಿತು. ಅದು ಕಂಪ್ಯೂಟರಿನ ಗುಣಮಟ್ಟ ಹೆಚ್ಚಿಸಲು ನಡೆದ ಹ್ಯಾಕ್ ಆಗಿತ್ತು.




ಅಂದಿನಿಂದ ಇಂದಿನವರೆಗೂ ಕಂಪ್ಯೂಟರಿನ ಭದ್ರತೆಯನ್ನು ಹೆಚ್ಚಿಸಲು ಕಾನೂನುಬದ್ಧವಾಗಿ ಹ್ಯಾಕ್‌ಗಳು ನಡೆಯುತ್ತಲೇ ಇವೆ. ಈ ಬಗೆಯ ಎಲ್ಲಾ ಹ್ಯಾಕ್‌ಗಳನ್ನು ಎಥಿಕಲ್ ಹ್ಯಾಕಿಂಗ್ ಎಂದು ಕರೆಯಲಾಗುತ್ತದೆ. ಇದಕ್ಕೆ ವಿರುದ್ಧವಾಗಿ ಕಾನೂನು ಉಲ್ಲಂಘಿಸಿ ನಡೆಸುವ ಹ್ಯಾಕಿಂಗ್ ಅನ್ನು ಅನ್‌ಎಥಿಕಲ್ ಹ್ಯಾಕಿಂಗ್ ಎಂದು ಕರೆಯಲಾಗುತ್ತದೆ.

ಮಾಹಿತಿಯನ್ನು ಕದಿಯುವುದಕ್ಕೆ, ತಿದ್ದುವುದಕ್ಕೆ, ಹಂಚುವುದಕ್ಕೆ ಹಾಗೂ ಹಾಳು ಮಾಡುವುದಕ್ಕೆ ಹ್ಯಾಕ್ ಮಾಡುವವರನ್ನು; ಹಣ ಕೊಡದಿದ್ದರೆ ಇವನ್ನೆಲ್ಲಾ ಮಾಡುತ್ತೇವೆ ಎಂಬ ಸಂದೇಶ ಕಳುಹಿಸಿ ಬಳಕೆದಾರರ ಎಲ್ಲಾ ಮಾಹಿತಿಯನ್ನು ಅವರು ಬಳಸಲಾಗದಂತೆ ನಿರ್ಬಂಧಿಸುವವರನ್ನು 'ಬ್ಲ್ಯಾಕ್ ಹ್ಯಾಟ್ ಹ್ಯಾಕರ್ಸ್' ಎಂದು ಕರೆಯುತ್ತಾರೆ.

## ಬೂದು ಕಪ್ಪು ಬಿಳಿ ಟೋಪಿಗಳು!

ಹ್ಯಾಕರ್‌ಗಳನ್ನು ಮೂರು ವಿಧವಾಗಿ ವಿಂಗಡಿಸಬಹುದು.

- ಬಿಳಿ ಟೊಪ್ಪಿಗೆ ಹ್ಯಾಕರ್ಸ್
- ಬೂದು ಟೊಪ್ಪಿಗೆ ಹ್ಯಾಕರ್ಸ್
- ಕಪ್ಪು ಟೊಪ್ಪಿಗೆ ಹ್ಯಾಕರ್ಸ್

## ಬಿಳಿ ಟೊಪ್ಪಿಗೆ ಹ್ಯಾಕರ್ಸ್

ಯಾವುದೇ ಒಂದು ಸಂಸ್ಥೆಗೆ, ಸರ್ಕಾರಕ್ಕೆ, ಅವುಗಳ ನೆಟ್‌ವರ್ಕ್ ಮತ್ತು ಕಂಪ್ಯೂಟರ್‌ಗಳ ಭದ್ರತೆಗಾಗಿ ಕೆಲಸ ಮಾಡುವವರೇ ವೈಟ್ ಹ್ಯಾಟ್ ಹ್ಯಾಕರ್‌ಗಳು. ಇವರನ್ನು ಎಥಿಕಲ್ ಹ್ಯಾಕರ್‌ಗಳು ಎಂದು ಕೂಡ ಕರೆಯುತ್ತಾರೆ. ಇವರು ಹ್ಯಾಕ್ ಮಾಡುವ ಎಲ್ಲಾ ಕೌಶಲ್ಯಗಳನ್ನು ಹೊಂದಿದ್ದು, ಒಳ್ಳೆಯ ಉದ್ದೇಶದಿಂದ ಭದ್ರತೆಗೆ ಅಪಾಯವೊಡ್ಡುವ ಲೋಪದೋಷ ಕಂಡುಹಿಡಿಯುವ ಹ್ಯಾಕರ್‌ಗಳಾಗಿದ್ದಾರೆ. ಕಳ್ಳತನದ ಗುಟ್ಟುಗಳನ್ನು ಭೇದಿಸುವ ಪೊಲೀಸರಿಗೆ ಇವರನ್ನು ಹೋಲಿಸಬಹುದು. ಮುಖ್ಯವಾಗಿ ಇವರುಕಪ್ಪು ಹ್ಯಾಟಿನ ಹ್ಯಾಕರ್‌ಗಳು ಎಸಗುವ ಸೈಬರ್ ಕೃತ್ಯಗಳನ್ನು ತಡೆಯುವ ಕೆಲಸ ಮಾಡುತ್ತಾರೆ.

ವೆಬ್ ಅಪ್ಲಿಕೇಶನ್, ಪ್ರೋಗ್ರಾಮಿಂಗ್ ಜ್ಞಾನ,ಆಪರೇಟಿಂಗ್ ಸಿಸ್ಟಂ, ಇಂಟರ್‌ನೆಟ್ ಸೆಕ್ಯೂರಿಟಿ ಸಿಸ್ಟಂ, ಅಸೆಂಬ್ಲಿ ಲ್ಯಾಂಗ್ವೇಜ್‌ಗಳೇ ಮುಂತಾದ ಪರಿಣತಿಯನ್ನು ನೆಟ್‌ವರ್ಕ್ ಹಾಗೂ ಕಂಪ್ಯೂಟರ್‌ನಲ್ಲಿ ಇರುವ ಸುರಕ್ಷತಾ ಅಂಶ ಕಾಪಾಡುವುದಕ್ಕೋಸ್ಕರ, ಭದ್ರತಾ ತಾಂತ್ರಿಕ ಲೋಪಗಳನ್ನು ಹುಡುಕಿ ಸರಿಪಡಿಸುವ ಕೆಲಸವನನ್ನು ಇವರು ಮಾಡುತ್ತಿರುತ್ತಾರೆ.

## ಚಿಗುರು ಮೀಸೆಯ ಎಥಿಕಲ್ ಹ್ಯಾಕರ್!

ಎಥಿಕಲ್ ಹ್ಯಾಕರ್‌ಗೆ ಒಂದು ಉತ್ತಮ ಉದಾಹರಣೆ ಉತ್ತರ ಭಾರತದ 23 ವರ್ಷದ ಶಿವಂ ವಸಿಷ್ಠ ಎಂಬ ಹುಡುಗ. ಈ ತರುಣ ಹ್ಯಾಕಿಂಗ್ ಅನ್ನು ವೃತ್ತಿಯಾಗಿ ತೆಗೆದುಕೊಂಡಿದ್ದಾನೆ.

ಸ್ಯಾನ್‌ಫ್ರಾನ್ಸಿಸ್ಕೊದ 'ಹ್ಯಾಕರ್ ಒನ್' ಎಂಬ